1143
555


S.D.M. LAW COLLEGE LIBRARY
MANGALORE - 575 003

# ತುಳುನಾಡಿನ ಪ್ರಾಣಿಜಾನಪದ

ಡಾ. ಅಶೋಕ ಆಳ್ವ

ಸಿರಿಕಮಲ ಪ್ರಕಾಶನ
ಪಡುಬಿದಿರೆ, ಉಡುಪಿ

Book Donated By
Dr. Tharanath, Principal, S.D.M. Law College, Mangalore




**Tulunadina Prani Janapada**
A book on Animal Lore
of Tulunadu previously a
research paper of Ph.D. by
**Dr. Ashok Alva**
'Anavarana'
Lord Krishna Estate
Iddya, Surathkal
Mangaluru - 575 014
Mobile : 9900406295

Published by
**Siri Kamala Prakashana**
Ramanagara, Nadsal
Padubidre, Udupi - 574 111
Mobile : 9880352100

© : Author
First Edition : 2021
Size : Demy 1/8
Paper used : 80 gsm NS ML
Pages : 308
Price : Rs. 300

Cover Design :
**Prithviraj Kavathar**

Page Designed & Printed at
**Aakrithi Prints**
Light House Hill Road
Mangaluru - 575 001
Tel: 0824 2972002

556

823 ALV

25889

S.D.M. LAW COLLEGE LIBRARY
MANGALORE - 575 003

## ಮುನ್ನುಡಿ

ಡಾ. ಅಶೋಕ ಆಳ್ವರು ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಸಂಶೋಧನೆ ನಡೆಸಿ 1995ರಲ್ಲಿ ಪಿಎಚ್.ಡಿ. ಪದವಿ ಪಡೆದ 'ತುಳುನಾಡಿನ ಪ್ರಾಣಿ ಜಾನಪದ' ಎಂಬ ನಿಬಂಧವನ್ನು 25 ವರ್ಷಗಳ ಬಳಿಕ ಹೊಸತಾಗಿ ಇನ್ನಷ್ಟು ಕ್ಷೇತ್ರಕಾರ್ಯ ನಡೆಸಿ, ಪರಿಷ್ಕರಿಸಿದ ಕೃತಿಯು ಈಗ ಪ್ರಕಟವಾಗುತ್ತಿರುವುದು ತುಳು ಜಾನಪದ ಅಧ್ಯಯನದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ. ಈ ನಡುವಿನ 25 ವರ್ಷಗಳ ಅವಧಿಯಲ್ಲಿ ಡಾ. ಅಶೋಕ ಆಳ್ವರು ತುಳು ಜಾನಪದದ ಬಗ್ಗೆ ಹೆಚ್ಚಿನ ಅಧ್ಯಯನ, ಕ್ಷೇತ್ರಕಾರ್ಯ ಮತ್ತು ತರಬೇತಿಯ ಅನುಭವವನ್ನು ಹೊಂದಿದ್ದಾರೆ. ಉಡುಪಿಯ ಪ್ರಾದೇಶಿಕ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರದಲ್ಲಿ ಸಂಶೋಧಕ ಮಾರ್ಗದರ್ಶಕರಾಗಿ ಅವರು ನಡೆಸಿದ ಕ್ಷೇತ್ರಕಾರ್ಯಗಳು ಮತ್ತು ಹಿರಿಯ ಜಾನಪದ ವಿದ್ವಾಂಸ ಫಿನ್ಲೆಂಡ್‌ನ ಪ್ರೊ. ಲೌರಿ ಹಾಂಕೊ ಅವರ ಜೊತೆಗೆ ದೊರೆತ ತರಬೇತಿ – ಇವುಗಳಿಂದ ಅವರಿಗೆ ಹೆಚ್ಚಿನ ಸೂಕ್ಷ್ಮ ಅಧ್ಯಯನ ನಡೆಸಲು ಸಾಧ್ಯವಾಗಿದೆ. ಸಿರಿ ಜನಪದ ಮಹಾಕಾವ್ಯದ ಬಗ್ಗೆ ಅವರು ನಡೆಸಿದ ಕ್ಷೇತ್ರಕಾರ್ಯ ಮತ್ತು ಸಂದರ್ಶನಗಳು ಹಾಗೂ ಅವುಗಳ ಫಲಿತವಾಗಿ ಅವರು ಪ್ರಕಟಿಸಿದ 'ಸಿರಿ ಕಾವ್ಯಾಲೋಕನ' ಕೃತಿ ಇಂತಹ ಬೆಳವಣಿಗೆಯ ಫಲ.

ಡಾ. ಅಶೋಕ ಆಳ್ವರು 'ಪ್ರಾಣಿಜಾನಪದ' ಎಂಬ ನಿಬಂಧದಲ್ಲಿ ಮನುಷ್ಯ ಮತ್ತು ಪ್ರಾಣಿಗಳ ಸಂಬಂಧವನ್ನು ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಭಿನ್ನ ನೆಲೆಗಳಲ್ಲಿ ಅರ್ಥೈಸಲು ಮತ್ತು ವಿವರಿಸಲು ಪ್ರಯತ್ನಿಸಿದ್ದಾರೆ. ಆಹಾರ,

ಹಂದಿಯ ಬಲಿಯ ವಿವರಗಳು ಇಲ್ಲಿ ದೊರೆಯುತ್ತವೆ. ಗೋಂದೋಲು ಎಂಬ ಮರಾಠಿಗರ ಆರಾಧನೆಗೂ ಉತ್ತರಕರ್ನಾಟಕದ ಎಲ್ಲಮ್ಮ ಸಂಪ್ರದಾಯಕ್ಕೂ ಇರುವ ಹೋಲಿಕೆಯ ಅಧ್ಯಯನ ಇಲ್ಲಿನ ಸಂಶೋಧನೆಯ ಮುಖ್ಯ ಭಾಗ. ಹಾಗೆಯೇ ಗೋಂದೋಲು, ಭೈರವ, ಮೈಲಾರ ಸಂಬಂಧ ಕೂಡಾ ಸಂಶೋಧನೆಯ ಹೊಸ ದೃಷ್ಟಿಗೆ ಅವಕಾಶ ಕಲ್ಪಿಸುತ್ತದೆ.

'ಪ್ರಾಣಿ ಆರಾಧನೆ' ಭಾಗದಲ್ಲಿ ಅಶೋಕ ಆಳ್ವರು ಭೂತಾರಾಧನೆಗೆ ಸಂಬಂಧಿಸಿದ ನಾಲ್ಕು ಭೂತ (ದೈವ)ಗಳ ಪಠ್ಯ ಮತ್ತು ಪ್ರದರ್ಶನಗಳ ವೈವಿಧ್ಯಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದಾರೆ. ಇದು ಈ ನಿಬಂಧದಲ್ಲಿ ಹೆಚ್ಚು ವ್ಯಾಪಕತೆಯುಳ್ಳ ಅಧ್ಯಾಯ. ಇಲ್ಲಿ ಮೈಸಂದಾಯ–ನಂದಿಗೋಣ, ಪಂಜುರ್ಲಿ, ಪಿಲಿ ಚಾಮುಂಡಿ ಮತ್ತು ಪಿಲಿಭೂತಗಳ ಬಹುಮುಖಿ ಅಧ್ಯಯನವನ್ನು ಕಾಣಬಹುದು. ಆಳ್ವರು ಪ್ರತಿಯೊಂದು ಸಂದರ್ಭದಲ್ಲಿ ಮೊದಲಾಗಿ ಆ ಭೂತದ ಬಗ್ಗೆ ಈವರೆಗೆ ನಡೆದಿರುವ ಸಂಗ್ರಹ ಮತ್ತು ಅಧ್ಯಯನಗಳನ್ನು ಪ್ರಸ್ತುತಪಡಿಸಿ, ಅವುಗಳ ಮುಖ್ಯ ಫಲಿತಗಳನ್ನು ಚರ್ಚಿಸಿದ್ದಾರೆ. ಆಮೇಲೆ ತಮ್ಮ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಪಾಡ್ದನಗಳ ವೈವಿಧ್ಯಮಯ ವಿವರಗಳನ್ನು ಕೊಟ್ಟಿದ್ದಾರೆ. ಹಾಗೆ ಕೊಡುವಾಗ ಆಯಾ ದೈವದ ಹುಟ್ಟು ಮತ್ತು ಪ್ರಸರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ವಿದ್ವಾಂಸರು ಮಂಡಿಸಿರುವ ಪ್ರಮೇಯಗಳ ಜೊತೆಗೆ ತಮ್ಮ ಹೊಸ ಮಾಹಿತಿಗಳನ್ನು ಪ್ರಸ್ತುತಪಡಿಸಿದ್ದಾರೆ. ಆಮೇಲೆ ತಮ್ಮ ಕ್ಷೇತ್ರಕಾರ್ಯದಲ್ಲಿನ ಕಲಾವಿದರ ಸಂದರ್ಶನ ಮತ್ತು ತಮ್ಮ ಪರಿಶೀಲನಗಳ ಆಧಾರದಲ್ಲಿ ಆರಾಧನೆಯ ಸ್ವರೂಪದ ವೈವಿಧ್ಯಗಳನ್ನು ನಿರೂಪಿಸಿದ್ದಾರೆ. ಈ ರೀತಿಯ ವಿವೇಚನೆ ಹೆಚ್ಚು ವ್ಯವಸ್ಥಿತವಾಗಿ, ಅನೇಕ ಕಡೆ ತೌಲನಿಕವಾಗಿ ನಡೆದಿದೆ. ಮೈಸಂದಾಯ ಮತ್ತು ನಂದಿಗೋಣದ ವಿವರಣೆಗಳು ಕುತೂಹಲಕಾರಿಯಾಗಿವೆ. ಅವೆರಡು ಒಂದೇ ದೈವವೇ ಅಥವಾ ಭಿನ್ನವೇ ಎನ್ನುವ ಪ್ರಶ್ನೆಗೆ ಸರಳ ಉತ್ತರ ಕೊಡಲು ಸಾಧ್ಯ ಇಲ್ಲ. ಆರಾಧನೆಯ ಪ್ರಕ್ರಿಯೆಯ ಎಲ್ಲ ಘಟ್ಟಗಳೂ ನಮಗೆ ಲಭ್ಯ ಇಲ್ಲ. ಬೇರೆ ಬೇರೆ ಕಾಲಘಟ್ಟಗಳಲ್ಲಿ 'ಒಂದಾಗುವ' (Fusion) ಮತ್ತು 'ಒಡೆಯುವ' (Fission) ಕ್ರಿಯೆಗಳು ಆರಾಧನೆಯ ಸಂಸ್ಕೃತಿಯಲ್ಲಿ ನಡೆಯುತ್ತವೆ. ಇಲ್ಲಿ ಕೂಡಾ ಇಂತಹ ಪ್ರಕ್ರಿಯೆಗಳು ಸಂಭವಿಸಿರಬಹುದು. ಅದನ್ನು ಇದಮಿತ್ಥಂ ಎನ್ನುವುದು ಜನಪದಪ್ರಜ್ಞೆಗೆ ಹೊರತಾದುದು. ತುಳುವಿನಲ್ಲಿ 'ಎರು' ಶಬ್ದಕ್ಕೆ 'ಕೋಣ' ಎಂಬ ಅರ್ಥ ಇದೆ. 'ಎತ್ತು' ಎನ್ನುವುದಕ್ಕೆ 'ಹೋರಿ' ಎನ್ನುವ ಅರ್ಥ ಜನಪ್ರಿಯವಾಗಿ ಬಳಕೆ ಆಗುತ್ತಿದೆ. ಹೋರಿ ಮತ್ತು ಕೋಣ ಎರಡನ್ನೂ ಒಳಗೊಂಡ ಮಂದೆಗೆ 'ಎರು' (ಜಾನುವಾರು) ಎಂಬ ಪದಪ್ರಯೋಗ ಇದ್ದಿರಬಹುದು. 'ನಂದಿಗೋಣ' ಎನ್ನುವ ಪದಪ್ರಯೋಗವೂ

ಅಂತಹ ಒಂದು ಭಾಷಿಕರೂಪ ಆಗಿರಬಹುದು. ಸಾಕುಪ್ರಾಣಿಗಳಿಗೆ 'ಪವಿತ್ರ' ಎನ್ನುವ ಕಲ್ಪನೆ ಬಂದದ್ದು ತಡವಾಗಿ ಅನ್ನಿಸುತ್ತದೆ. ಹಾಗಾಗಿ ತುಳುವರಿಗೆ ಕೃಷಿಯಲ್ಲಿ ಬಳಸುವ ಹೋರಿ ಮತ್ತು ಕೋಣಗಳ ನಡುವೆ ತರತಮ ವ್ಯತ್ಯಾಸ ಇದ್ದ ಹಾಗೆ ಕಾಣಿಸುವುದಿಲ್ಲ. 'ಮಹಿಷ' ಸಂಸ್ಕೃತ ಪದದ ತುಳುವೀಕರಣ ಆಗಿ, ಅದು ಭೂತ /ದೈವವ ನಾಮಕರಣದ ಜೋಡಣೆಯಾಗಿ 'ಮೈಸಂದಾಯ' ಹೆಸರು ನಿಷ್ಪನ್ನ ಆಗಿರಬಹುದು. ಭೂತ /ದೈವಗಳ 'ನಾಮಕರಣ ಪ್ರಕ್ರಿಯೆ'ಯೇ ಒಂದು ಪ್ರತ್ಯೇಕ ಅಧ್ಯಯನದ ವಿಷಯ ಆಗಬಲ್ಲುದು.

'ಪಂಜುರ್ಲಿ' ಬಗ್ಗೆ ಕೂಡಾ ಈವರೆಗೆ ನಡೆದ ಅಧ್ಯಯನಗಳನ್ನು ಗಮನಿಸಿಕೊಂಡು ಅಶೋಕ ಆಳ್ವರು ತಮ್ಮ ಸಂಗ್ರಹದ 15 ಪಾಡ್ದನಗಳನ್ನು ಬಳಸಿಕೊಂಡು ವಿವೇಚಿಸಿರುವುದರ ಜೊತೆಗೆ ಪಂಜುರ್ಲಿ ಆರಾಧನೆಗೊಳ್ಳುವ ಸ್ಥಳ ಮತ್ತು ನಂಬುವ ಮನೆತನಕ್ಕೆ ಅನುಗುಣವಾಗಿ ಅದಕ್ಕೆ ಇರುವ ಹೆಸರುಗಳ ಪಟ್ಟಿಯನ್ನು ಕೊಟ್ಟಿದ್ದಾರೆ. 'ಪಿಲಿಚಾಮುಂಡಿ' ದೈವದ ಅಧ್ಯಯನ ವ್ಯಾಪಕವಾಗಿ ಇಲ್ಲಿ ಕಾಣಿಸಿಕೊಂಡಿದೆ. ಪಿಲಿ (ಹುಲಿ) ವಾಹನವಾಗಿ ಇದ್ದುಕೊಂಡು ಚಾಮುಂಡಿಯಂತಹ ಹೆಣ್ಣುದೈವದ ಆರಾಧನೆಯು ತುಳುವ ಸಂಸ್ಕೃತಿಯಲ್ಲಿ ನಡೆಯುವ ವಿಧಾನಗಳ ಪ್ರಾದೇಶಿಕ ವಿವರಗಳು ಇಲ್ಲಿ ದೊರೆಯುತ್ತವೆ. ಇಲ್ಲಿ ಪಾಡ್ದನಗಳ ತೌಲನಿಕ ಅಧ್ಯಯನ ಹೆಚ್ಚು ಸಮರ್ಪಕವಾಗಿ ನಡೆದಿದೆ. ಪಿಲಿಚಾಮುಂಡಿಯ ಉಗಮದ ಪಾಡ್ದನಕ್ಕಿಂತ ಅದರ ಮಹಿಮೆಯನ್ನು ಸಾರುವ, ತುಳುವ ಬದುಕಿಗೆ ನೇರವಾಗಿ ಸಂಬಂಧಪಟ್ಟ ಪಾಡ್ದನಗಳು ಮಹತ್ವದವು ಎಂದು ನನಗೆ ಅನ್ನಿಸುತ್ತದೆ. ಅನೇಕ ದೈವಗಳ ಉಗಮದ ಪಾಡ್ದನಗಳು ಕಾಲಕ್ರಮೇಣ ರಚನೆಯಾಗಿ ಸೇರ್ಪಡೆಯಾದ ಬಳಿಕದ ಹಂತದವು ಆಗಿರಬಹುದು. ಅನೇಕ ಉಗಮದ ಪಾಡ್ದನಗಳಲ್ಲಿ ಸಂಸ್ಕೃತೀಕರಣದ ಸುಳುಹುಗಳು ಸಿಗುತ್ತವೆ. ಇವತ್ತು ನಮಗೆ ದೊರೆಯುವ ದೈವ ಸಂಬಂಧಿ ಪಾಡ್ದನಗಳು ಬಿಡಿ ಬಿಡಿ ರಚನೆಗಳ ಸೇರ್ಪಡೆಗಳ ಮೂಲಕ ಜೋಡಣೆಗೊಂಡವು ಎನ್ನುವುದಕ್ಕೆ ಅವುಗಳ ಭಿನ್ನ ರೂಪಗಳಲ್ಲಿ ಕುರುಹುಗಳು ದೊರೆಯುತ್ತವೆ. ಸ್ಥಳೀಯ ಹೆಣ್ಣು ದೈವದ ಆರಾಧನೆಯು ಸಂಸ್ಕೃತೀಕರಣಗೊಂಡು 'ಚಾಮುಂಡಿ'ಯ ಸ್ವರೂಪವನ್ನು ಪಡೆದಿರಬೇಕು. 'ಪಿಲಿಭೂತ'ದ ಬಗೆಗಿನ ಅಶೋಕ ಆಳ್ವರ ಕ್ಷೇತ್ರಕಾರ್ಯ ಆಧಾರಿತ ವಿಶ್ಲೇಷಣೆ ತುಳು ಜಾನಪದ ಸಂಶೋಧನೆಯಲ್ಲಿ ಹೊಸತಾದುದು. ಪಿಲಿಭೂತದ ಪಾಡ್ದನದ ವಿವರಗಳು ಇನ್ನಷ್ಟು ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸುತ್ತವೆ. ಕಾಪು ಪಿಲಿಕೋಲವು ಒಂದು ವಿಶಿಷ್ಟ ವಿಚಿತ್ರ ಆರಾಧನಾ ಪದ್ಧತಿ. ಇದು ಸಾಮಾಜಿಕ ಅಸ್ಪೃಶ್ಯತೆಯ ನೆಲೆಯಿಂದಲೂ ಅಧ್ಯಯನಕ್ಕೆ ಒಳಗಾಗುವಂಥದ್ದು. ಪಂಜುರ್ಲಿ ಮತ್ತು ಪಿಲಿಭೂತದ ಆರಾಧನೆಗೆ ಸಂಬಂಧದ ಬಗ್ಗೆ ಆಳ್ವರು ಕಲವು

ಸೂಚನೆಗಳನ್ನು ಕೊಟ್ಟಿದ್ದಾರೆ. ಅವನ್ನು ವಿಸ್ತರಿಸಲು ಅವಕಾಶ ಇದೆ.

ಜನಪದವೈದ್ಯ ಪದ್ಧತಿಯಲ್ಲಿ ಸಸ್ಯಜಾನಪದದಷ್ಟು ಪ್ರಾಣಿಜಾನಪದ ಜನಪ್ರಿಯವಲ್ಲ. ಅಶೋಕ ಆಳ್ವರು ಜನಪದವೈದ್ಯದ ತಾತ್ವಿಕತೆಯ ಪ್ರಸ್ತಾವನೆಯೊಂದಿಗೆ ಮೊದಲ ಬಾರಿ 'ಪ್ರಾಣಿ ಜನಪದವೈದ್ಯ' ಪದ್ಧತಿಯ ರೂಪುರೇಷೆಯನ್ನು ಕೊಡಲು ಪ್ರಯತ್ನಿಸಿದ್ದಾರೆ. ಅವುಗಳಲ್ಲಿ ಮನುಷ್ಯರಿಗೆ ಪ್ರಾಣಿಉತ್ಪನ್ನಗಳ ಮೂಲಕ ಚಿಕಿತ್ಸೆ ಮಾಡುವುದು ಒಂದು ವಿಧವಾದರೆ, ಪ್ರಾಣಿಗಳ ಕಾಯಿಲೆಗಳ ಚಿಕಿತ್ಸೆ ಇನ್ನೊಂದು ವಿಧ. ಎರಡು ಪದ್ಧತಿಗಳ ಬಗ್ಗೆ ತಮ್ಮ ಕ್ಷೇತ್ರಕಾರ್ಯ ಆಧಾರಿತ ಮಾಹಿತಿಗಳ ವಿವರಗಳನ್ನು ಇಲ್ಲಿ ದಾಖಲಿಸಿದ್ದಾರೆ. ಇವುಗಳಲ್ಲಿ ಮಾಂತ್ರಿಕತೆಯ ಅಂಶವೂ ಮುಖ್ಯಪಾತ್ರವನ್ನು ವಹಿಸುತ್ತದೆ. ಮಂತ್ರತಂತ್ರಗಳು ಇಲ್ಲಿ ನಂಬಿಕೆಯ ಆಧಾರದಲ್ಲಿ ಕಾರ್ಯವೆಸಗುತ್ತವೆ. ಹಾವುಗಳಿಗೆ ಸಂಬಂಧಿಸಿದ ವಿಷಚಿಕಿತ್ಸೆಯ ಬಗ್ಗೆ ಇಲ್ಲಿ ಹೆಚ್ಚು ವಿವರಗಳಿವೆ. ಮಾಂತ್ರಿಕ ಚಿಕಿತ್ಸೆಯ ಪಠ್ಯವನ್ನು ಕೊಟ್ಟಿದ್ದಾರೆ. ಹಾಗೆಯೇ ಸೊಪ್ಪುಹಾಕುವ ಮಂತ್ರವಾದದ ವಿವರವಾದ ಪಠ್ಯಗಳು ಇವೆ. ಈ ವಿಷಯವು ಇನ್ನಷ್ಟು ಸಾಮಗ್ರಿಗಳ ಸಂಗ್ರಹ ಮತ್ತು ಅಧ್ಯಯನಕ್ಕೆ ಅವಕಾಶ ಇರುವ ಸಂಶೋಧನೆಯ ಕ್ಷೇತ್ರ.

ಡಾ. ಅಶೋಕ ಆಳ್ವರ 'ಪ್ರಾಣಿ ಜಾನಪದ' ಎಂಬ ನಿಬಂಧದ ಪ್ರಕಟಣೆಯು ತುಳುಜಾನಪದದ ಒಂದು ಹೊಸ ಕ್ಷೇತ್ರದ ಸ್ವರೂಪವನ್ನು ಮತ್ತು ಸಾಧ್ಯತೆಗಳನ್ನು ಕಟ್ಟಿಕೊಡಲು ಶಕ್ತವಾಗಿದೆ. ಈ ಕ್ಷೇತ್ರದಲ್ಲಿ ಇಲ್ಲಿನ ಒಂದೊಂದು ಅಧ್ಯಾಯದ ವಿಷಯವನ್ನು ಎತ್ತಿಕೊಂಡು ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಇನ್ನಷ್ಟು ಸೂಕ್ಷ್ಮಾವಲೋಕನಗಳನ್ನು ಮಾಡಲು ಈ ಗ್ರಂಥವು ಅವಕಾಶದ ಬಾಗಿಲುಗಳನ್ನು ತೆರೆದಿದೆ. ಸಂಶೋಧನೆ ಎಂಬುದು ಒಂದು ಪ್ರಕ್ರಿಯೆಯೇ ಹೊರತು, ಅದು ಒಂದು ಸಿದ್ಧಾಂತ ಅಲ್ಲ. ಸಂಶೋಧನೆಯ ಬರಹಕ್ಕೆ ಅಲ್ಪವಿರಾಮ ಮತ್ತು ಅರ್ಧವಿರಾಮಗಳು ಇರುತ್ತವೆಯೇ ಹೊರತು ಪೂರ್ಣ ವಿರಾಮ ಇರುವುದಿಲ್ಲ. ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗವು ತುಳು ಜಾನಪದದ ಅಕಾಡೆಮಿಕ್ ಸಂಶೋಧನೆಗೆ ಅವಕಾಶದ ಬಾಗಿಲು ತೆರೆದು ಸುಮಾರು ನಲುವತ್ತು ವರ್ಷಗಳು ತುಂಬುತ್ತಿವೆ. ಈ ಕಾಲಾವಧಿಯಲ್ಲಿ ಕರಾವಳಿಯ ಯುವ ಪೀಳಿಗೆಯ ಸಂಶೋಧಕರು ತುಳು ಜಾನಪದದ ಬಹುತ್ವದ ಕ್ಷೇತ್ರಗಳಲ್ಲಿ ಎಂಫಿಲ್ ಮತ್ತು ಪಿಎಚ್‌ಡಿ ಪದವಿಗಳಿಗಾಗಿ ಸಂಶೋಧನೆ ನಡೆಸಿ ಪದವಿಗಳನ್ನು ಪಡೆದಿದ್ದಾರೆ; ಅನೇಕರು ಈಗಲೂ ಸಂಶೋಧನೆ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ತುಳು ಜಾನಪದದ ಸಹಿತ ಯಾವುದೇ ಸಂಸ್ಕೃತಿನಿಷ್ಠ ಅಧ್ಯಯನದಲ್ಲಿ ತೀರ್ಮಾನ ಅಥವಾ ಕೊನೆಯ ಮಾತು ಎಂದು ಇರುವುದಿಲ್ಲ ಮತ್ತು ಇರಬಾರದು

ಮುಖ್ಯವಾಗಿ ಮೂಲ ಅಥವಾ ಆರಂಭ ಅಥವಾ ಶಬ್ದನಿಷ್ಪತ್ತಿ – ಇಂತಹ ಯಾವುದೇ ವಿಷಯದಲ್ಲೂ ಇದು ಸರಿ ಅಥವಾ ಇದು ತಪ್ಪು ಎನ್ನುವ ತೀರ್ಪುರೂಪದ ಅಭಿಪ್ರಾಯ ಇರಬಾರದು. ಜಾನಪದದಲ್ಲಿ ಸರಿತಪ್ಪುಗಳ ಪ್ರಶ್ನೆಯೇ ಬರುವುದಿಲ್ಲ. ಜನಪದರು ತಮ್ಮ ಮನೋಧರ್ಮ, ಅನುಭವ ಅಥವಾ ಲೋಕದೃಷ್ಟಿಗೆ ಅನುಗುಣವಾಗಿ ಕಥನಗಳನ್ನು ನಿರ್ಮಿಸುತ್ತಾರೆ, ಅಭಿಪ್ರಾಯಗಳನ್ನು ರೂಢಿಸಿಕೊಳ್ಳುತ್ತಾರೆ. ಸಂಶೋಧನೆಯಲ್ಲಿ ತಾನು ಹೇಳಿದ್ದು ಸರಿ ಅಥವಾ ಇಂತಹ ಆರಾಧನೆಯ ಮೂಲಸ್ವರೂಪ ಹೀಗೆಯೇ – ಎನ್ನುವುದು ಸಂಶೋಧಕರ ಮಿತಿಯನ್ನು ಸೂಚಿಸುತ್ತದೆ. ತುಳು ಜಾನಪದದಲ್ಲಿ ಸಂಶೋಧನೆಯ ನೆಲೆಯಲ್ಲಿ ಮತ್ತು ಸಾಮಾಜಿಕ ತಾಂತ್ರಿಕ ಮಾಧ್ಯಮಗಳಲ್ಲಿ ಅಭಿಪ್ರಾಯಗಳನ್ನು ಪ್ರಕಟಿಸುವಾಗ ಇಂತಹ ಎಚ್ಚರ ಮತ್ತು ವಿನಯ ಇದ್ದರೆ ಒಳ್ಳೆಯದು. ತುಳು ಜಾನಪದ ಸಂಶೋಧನೆ ಇನ್ನಷ್ಟು ಮಗ್ಗುಲುಗಳಲ್ಲಿ ಇನ್ನಷ್ಟು ವ್ಯಾಪಕ ಕ್ಷೇತ್ರಗಳ ನೆರವಿನಲ್ಲಿ ನಡೆಸಬಹುದಾದ ಸಾಧ್ಯತೆಗಳ ದೃಷ್ಟಿಯಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ.

ಡಾ. ಅಶೋಕ ಆಳ್ವರು ತಮ್ಮ ವಯಸ್ಸು ಮತ್ತು ದೀರ್ಘಕಾಲದ ಅನುಭವದ ದೃಷ್ಟಿಯಿಂದ ತುಳು ಜಾನಪದ ಸಂಶೋಧಕರಾಗಿ ಹೆಚ್ಚು ವಿಶಾಲ ಮನೋಪ್ರವೃತ್ತಿಯನ್ನು ಹೊಂದಿದ್ದಾರೆ. ಅದಕ್ಕೆ ಈ ಗ್ರಂಥದಲ್ಲಿ ಅವರು ಪರಿಶೀಲಿಸಿದ ಗ್ರಂಥಗಳು, ಅವರು ನಡೆಸಿದ ವ್ಯಾಪಕ ಕ್ಷೇತ್ರಕಾರ್ಯ, ಅವರು ಕೊಡುವ ಸಮತೂಕದ ಅಭಿಪ್ರಾಯಗಳು ಸಾಕ್ಷಿಯಾಗಿವೆ. ತುಳು ನಾಡಿನ ಹೊಸ ಪೀಳಿಗೆಯ ಸಂಶೋಧಕರು ಈ ಗ್ರಂಥದ ಓದಿನಿಂದ ಪ್ರಭಾವಿತರಾಗಿ, ಇಲ್ಲಿ ಅವರು ಪ್ರಸ್ತಾವಿಸಿದ ವಿಷಯಗಳಲ್ಲಿ ಕೆಲವನ್ನಾದರೂ ಕೈಗೆತ್ತಿಕೊಂಡು ಮುಂದಿನ ಸಂಶೋಧನೆಗೆ ಹೊಸ ಮಗ್ಗುಲುಗಳನ್ನು ಜೋಡಿಸಬೇಕು ಎಂದು ಆಶಿಸುತ್ತೇನೆ. ಇಂತಹ ಹೊಸ ಸಂಶೋಧನಾ ಕ್ಷೇತ್ರದ ಪ್ರವೇಶಕ್ಕೆ ಬಾಗಿಲು ತೆರೆದ ತಮ್ಮ ನಿಬಂಧದ ಗ್ರಂಥರೂಪದ ಪ್ರಕಟಣೆಗಾಗಿ ಡಾ. ಅಶೋಕ ಆಳ್ವರನ್ನು ಹಾಗೂ ಕೃತಿಯನ್ನು ಪ್ರಕಟಿಸಿದ 'ಸಿರಿಕಮಲ' ಪ್ರಕಾಶನದ ಡಾ. ವೈ.ಎನ್. ಶೆಟ್ಟಿಯವರನ್ನು ಅಭಿನಂದಿಸಲು ಸಂತೋಷಪಡುತ್ತೇನೆ.

ಜಪ್ಪು ಕುಡ್ಪಾಡಿ
15 ನವಂಬರ 2021

ಬಿ.ಎ. ವಿವೇಕ ರೈ

562

# ಪುಟನೋಟ


1 ಪ್ರಾಣಿಜಾನಪದದ ಪರಿಕಲ್ಪನೆ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ 23

2 ಆಹಾರ 38

3 ಬೇಟೆ 65

4 ಕ್ರೀಡೆ ಕಂಬಳ 85

5 ಪ್ರಾಣಿಬಲಿ 100

6 ಪ್ರಾಣಿ ಆರಾಧನೆ 159

7 ಪ್ರಾಣಿ ಜನಪದ ವೈದ್ಯ 219

8 ಅಧ್ಯಯನದ ಫಲಿತಗಳು 289

9 ಸಾಂಸ್ಕೃತಿಕ ಪದಕೋಶ 293

10 ಮಾಹಿತಿದಾರರ ಹೆಸರು ಮತ್ತು ವಿಳಾಸ 298

11 ಪರಾಮರ್ಶನ ಗ್ರಂಥಗಳು 300


SHRI DHARMASTHALA ... LAW COLLEGE

563

ಡಾ. ಅಶೋಕ ಆಳ್ವರು ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ನಡೆಸಿದ ಸಂಶೋಧನೆ, ಉಡುಪಿಯ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದಲ್ಲಿ ಸಂಶೋಧಕ ಮಾರ್ಗದರ್ಶಕರಾಗಿ ನಡೆಸಿದ ಕ್ಷೇತ್ರಕಾರ್ಯಗಳು ಮತ್ತು ಹಿರಿಯ ಜಾನಪದ ವಿದ್ವಾಂಸ ಪ್ರೊ. ಲೌರಿ ಹಾಂಕೊ ಅವರ ಜೊತೆಗೆ ದೊರೆತ ತರಬೇತಿಗಳಿಂದ ಅವರಿಗೆ ಸೂಕ್ಷ್ಮ ಅಧ್ಯಯನ ನಡೆಸಲು ಸಾಧ್ಯವಾಗಿದೆ. ಮನುಷ್ಯ ಮತ್ತು ಪ್ರಾಣಿಗಳ ಸಂಬಂಧವನ್ನು ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಭಿನ್ನ ನೆಲೆಗಳಲ್ಲಿ ಅರ್ಥೈಸಲು ಮತ್ತು ವಿವರಿಸಲು ಅವರು ಈ ಗ್ರಂಥದಲ್ಲಿ ಪ್ರಯತ್ನಿಸಿದ್ದಾರೆ.

ಮಾಂಸಾಹಾರದ ಆಯ್ಕೆ ಮತ್ತು ನಿಷೇಧಗಳ ಚರ್ಚೆ ಇಲ್ಲಿ ನಡೆಸಿದ್ದಾರೆ. ಕೆಡ್ಡಸ, ಮಡೆಬೊಜ್ಜ, ಮಾಮಿಸೂಕೆ, ಸೀಮಂತ – ಇಂತಹ ಆಚರಣೆಗಳ ವಿವರಗಳು ಪ್ರಾಣಿ ಆಹಾರದ ಹಿನ್ನೆಲೆಯಲ್ಲಿ ಬರುತ್ತವೆ. ಮಕ್ಕಳ ಮಾಂಸಾಹಾರದ ಪ್ರಸ್ತಾವಗಳಿವೆ. ಜನಪದವೈದ್ಯದ ತಾತ್ವಿಕತೆಯ ಪ್ರಸ್ತಾವನೆಯೊಂದಿಗೆ ಮೊದಲ ಬಾರಿ 'ಪ್ರಾಣಿ ಜನಪದವೈದ್ಯ' ಪದ್ಧತಿಯ ರೂಪುರೇಷೆಯನ್ನು ಕೊಡಲು ಪ್ರಯತ್ನಿಸಿದ್ದಾರೆ. 'ಕಂಬಳ' ಎನ್ನುವುದು ಕೂಡಾ ಕೃಷಿ ಸಂಸ್ಕೃತಿಯ ಉತ್ಪನ್ನ. ಅದರ ಬಗೆಗೆ ಬಂದ ಬರಹಗಳನ್ನು ಗಮನಿಸಿಕೊಂಡು ಕಂಬಳ ಎನ್ನುವುದು ಕ್ರೀಡೆಯೋ ಆಚರಣೆಯೋ ಎಂಬ ಚರ್ಚೆಯನ್ನು ನಡೆಸಿದ್ದಾರೆ. ಮಾರಿಪೂಜೆಯನ್ನು ಇಲ್ಲಿ ವಿಶೇಷವಾಗಿ ಚರ್ಚಿಸಿದ್ದಾರೆ. ಗೋಂದೋಲು ಎಂಬ ಮರಾಠಿಗರ ಆರಾಧನೆಗೂ ಉತ್ತರಕರ್ನಾಟಕದ ಎಲ್ಲಮ್ಮ ಸಂಪ್ರದಾಯಕ್ಕೂ ಇರುವ ಹೋಲಿಕೆಯ ಅಧ್ಯಯನ ಇಲ್ಲಿನ ಸಂಶೋಧನೆಯ ಮುಖ್ಯ ಭಾಗ. ಭೂತಾರಾಧನೆಗೆ ಸಂಬಂಧಿಸಿದ ನಾಲ್ಕು ಭೂತ (ದೈವ)ಗಳ ಪಠ್ಯ ಮತ್ತು ಪ್ರದರ್ಶನಗಳ ವೈವಿಧ್ಯಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದಾರೆ.

ಡಾ. ಅಶೋಕ ಆಳ್ವರು ತಮ್ಮ ವಯಸ್ಸು ಮತ್ತು ದೀರ್ಘಕಾಲದ ಅನುಭವದ ದೃಷ್ಟಿಯಿಂದ ತುಳು ಜಾನಪದ ಸಂಶೋಧಕರಾಗಿ ಹೆಚ್ಚು ವಿಶಾಲ ಮನೋಪ್ರವೃತ್ತಿಯನ್ನು ಹೊಂದಿದ್ದಾರೆ. ಅದಕ್ಕೆ ಈ ಗ್ರಂಥದಲ್ಲಿ ಅವರು ಪರಿಶೀಲಿಸಿದ ಗ್ರಂಥಗಳು, ಅವರು ನಡೆಸಿದ ವ್ಯಾಪಕ ಕ್ಷೇತ್ರಕಾರ್ಯ, ಅವರು ಕೊಡುವ ಸಮತೂಕದ ಅಭಿಪ್ರಾಯಗಳು ಸಾಕ್ಷಿಯಾಗಿವೆ.

ಬಿ.ಎ. ವಿವೇಕ ರೈ

**ಸಿರಿಕಮಲ ಪ್ರಕಾಶನ**
ಪಡುಬಿದಿರೆ, ಉಡುಪಿ

ರೂ. 300

SHRI DHARMASTHALA ... COLLEGE